

ಕುಡಿಯುತ್ತ. ಸಿಗಾಕ ಬೇಕಲಾ ನೀನು. ಸಿಗ್ತಿದಿ ಮಗ್ಳ. ಅವಾಗೈತಿ ನಿಂದು ಶಾಸ್ತ್ರ…' ಅನ್ನುತ್ತ ಮರಳಿ ಮನೆ ಕಡೆ ಬಂದ.

ಮನೆಯೊಳಗೆ ನೋಡಿದರೆ ಹಾಸಿಗೆಯಲ್ಲಿ ಶಾರಿ ಮಲಗಿದ್ದಳು. ಕಣ್ಣು ತಿಕ್ಕಿಕೊಂಡು ಮತ್ತೆ ನೋಡಿದ. 'ಅಲಾ ಕಳ್ಳಿ. ಎಷ್ಟಾರ ನಾಟಕ ಮಾಡಕತ್ತಿ. ಹೆಂಗಾರ ನನ್ನ ಕಣ್ಣು ತಪ್ಪಿಸಿ ಬಂದಿರಬೇಕು ನೀನು. ನಾನು ಅನ್ಕೊಂಡಂಗೇನು ನೀನು ಸರಳ ಇಲ್ಲ. ಬಾಳ ಚಾಲಕಿ ಅದಿ…' ಅಂತ ಮನಸೊಳಗ ಅನ್ಕೋತ ಹಗೂರ ಸದ್ದು ಮಾಡದೆ ಅವಳ ಬಳಿ ಬಂದು ಮಲಗಿದ.

ಶಾರಿ 'ಯಾಕ್ರಿ ಹಂಗ ಕಳ್ಳ ಬೆಕ್ಕಿನಂಗ ಹಗೂರಕ ಬಂದು ಮಲಗಾಕತ್ತಿರಲಾ. ನೀವೇನು ಸೌಂಡು ಮಾಡಿದ್ರೂ ನಿದ್ದಿ ಹಾರಿ ಹೋಗಲ್ಲ ನಂದೇನು. ಎಲ್ಲಿ ಹೋಗಿದ್ರಿ ಇಷ್ಟೊತ್ತು…' ಅಂದಳು.

ಈರಣ್ಣ ಕ್ಷಣ ಹೊತ್ತು ಬೆವತುಹೋದ. ಏನು ಹೇಳಬೇಕೆಂದು ತಿಳಿಯಲಿಲ್ಲ. ಸಾವರಿಸಿಕೊಂಡು 'ಒಂದಾಕ ಹೋಗಿದ್ದೆ…' ಅಂತ ಹೇಳಿದ. ಇವನ ಮಾತು ತುಟಿ ದಾಟುವುದರೊಳಗೆ ಆಕೆ ನಿದ್ದೆಯ ಮಬ್ಬಿಗೆ ಹೋದಳು. ಏನೊಂದೂ ತಿಳಿಯದೆ, ನೂರಾರು ಯಕ್ಷಪ್ರಶ್ನೆಗಳು ಮೂಡಿ ಗೊಂದಲಗೊಂಡ.

***

ದಿನಗಳು ಒಣಗಿದ ಎಲೆಗಳು ಉದುರಿದಂತೆ ಉದುರುತ್ತ ಒಂದೊಂದೇ ಕಳೆದುಹೋಗತೊಡಗಿದ್ದವು. ಈರಣ್ಣನ ಅನುಮಾನ ದಿನ ದಿನವೂ ಬಲಗೊಳ್ಳುತ್ತಲೇ ಹೋಯಿತು. ಚೂರಿಯನ್ನು ದಿನವೂ ಮಸೆಯುತ್ತಿದ್ದ. ಅದು ಎಷ್ಟೊಂದು ಹರಿತವಾಗಿತ್ತೆಂದರೆ ಸುಮ್ಮನೆ ಚೂರಿ ಮೇಲೆ ಸ್ವಲ್ಪ ಬೆರಳಾಡಿಸಿದರೂ ಸಾಕು, ಬೆರಳು ಕತ್ತರಿಸಿ ಹೋಗಿ ರಕ್ತ ಚಿಲ್ಲನೆ ಚಿಮ್ಮಿ ನೆಲದ ಪಾಲಾಗುವಷ್ಟು ಹರಿತಗೊಂಡಿತ್ತು. ದಿನವೂ ರಾತ್ರಿ ತಲೆದಿಂಬಿನ ಕೆಳಗಡೆಯೇ ಆ ಚೂರಿಯನ್ನು ಇಟ್ಟುಕೊಂಡು ಮಲಗುತ್ತಿದ್ದ.

ನಿದ್ದೆಗಣ್ಣಿನಲ್ಲಿ ಅತ್ಲಾಗಿತ್ಲಾಗ ಹೊರಳಾಡುವಾಗ ಚೂರಿ ತಲೆದಿಂಬು ತೂರಿಕೊಂಡು ಈರಣ್ಣನ ತಲೆಯೊಳಗಿಂದ ಹಾಯ್ದು ಕಣ್ಣೊಳಗಿನಿಂದ ಹೊರ ಬಂತು. ನಳದ ನೀರಿನಂತೆ ಕಣ್ಣೊಳಗಿಂದ ರಕ್ತ ದಬ ದಬ ಸುರಿಯತೊಡಗಿತು. ಆಘಾತಗೊಂಡಿದ್ದ ಈರಣ್ಣ ಚಿಟ್ಟನೆ ಚೀರಬೇಕೆಂದರೆ ದನಿಯೇ ಹೊರಡುತ್ತಿಲ್ಲ. ಕಣ್ಣೊಳಗಿಂದ ರಕ್ತ ಪುಟಿಯುತ್ತಲೇ ಇದೆ. ಬೋರ್‌ವೆಲ್ ಕೊರೆಸುವಾಗ ನೀರು